ಕುಡಿಯುವ ನೀರಿನ ಯೋಜನೆಗಳ ಜಾರಿ

778(798) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ:(ಭಾಲ್ಕಿ) ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯಿಂದ ಬೀದರ್ ಜಿಲ್ಲೆಯ ಯಾವ ಯಾವ ಪಟ್ಟಣಗಳಿಗೆ ಕುಡಿಯುವ ನೀರಿನ ಯೋಜನೆಗಳನ್ನು ಯಾವಾಗ ಜಾರಿಗೊಳಿಸಲಾಯಿತು; ಈ ಪ್ರತಿ ಯೋಜನೆಗಳ ಅಂದಾಜು ವೆಚ್ಚವೆಷ್ಟು ಹಾಗೂ ಈ ಪೈಕಿ ಇಲ್ಲಿಯವರೆವಿಗೆ ಯೋಜನೆಗಳ ಅನುಷ್ಠಾನಕ್ಕೆ ವೆಚ್ಚ ಮಾಡಿರುವ ಹಣವೆಷ್ಟು; (ಯೋಜನಾವಾರು ವಿವರ ಒದಗಿಸುವುದು);

ಆ) ಕೆ.ಯು.ಡಬ್ಲು.ಎಸ್.ಬಿ.ಯಿಂದ ಭಾಲ್ಕಿ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಯೋಜನೆಗೆ ಯಾವಾಗ ಚಾಲನೆ ನೀಡಲಾಯಿತು; ಈ ಯೋಜನೆಯ ಅಂದಾಜು ವೆಚ್ಚವೆಷ್ಟು;

ಇ) ಈ ಯೋಜನೆಗೆ ಇಲ್ಲಿಯವರೆವಿಗೆ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ;

ಈ) ಈಗ ಕಾಮಗಾರಿ ಯಾವ ಹಂತದಲ್ಲಿದೆ;

ಉ) ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸಲು ರೂಪಿಸಿರುವ ಯೋಜನೆಗಳೇನು;

ಊ) ಭಾಲ್ಕಿ ಪಟ್ಟಣದಲ್ಲಿ ಕುಡಿಯುವ ನೀರಿನ ತೀವ್ರ ತೊಂದರೆ ಇರುವುದರಿಂದ ಆದಷ್ಟು ಶೀಘ್ರವಾಗಿ ಯೋಜನೆಯನ್ನು ಪೂರ್ಣಗೊಳಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಎಸ್ ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಅ) ಕರ್ನಾಟಕ ಜಲಮಂಡಳಿಯಿಂದ ಬೀದರ್ ಜಿಲ್ಲೆಯ ನಗರ/ಪಟ್ಟಣಗಳಿಗೆ ಈ ಕೆಳಕಂಡ ಕುಡಿಯುವ ನೀರು ಸರಬರಾಜು ಯೋಜನೆಗಳನ್ನು ಒದಗಿಸಲಾಗಿದೆ.

1) ಬೀದರ್:

ಯೋಜನೆ: ಬೀದರ್ ನಗರಕ್ಕೆ ಮಾಂಜ್ರಾ ನದಿ ಮೂಲದಿಂದ ಸಮಗ್ರ ನೀರು ಸರಬರಾಜು ಯೋಜನೆ ಅಂದಾಜು ವೆಚ್ಚ: ರೂ.650.00 ಲಕ್ಷಗಳು ಯೋಜನೆಗೆ ತಗುಲಿದ ವೆಚ್ಚ: ರೂ.2120.68 ಲಕ್ಷಗಳು ಯೋಜನೆ ಪೂರ್ಣಗೊಳಿಸಿದ ದಿನಾಂಕ: ಮೇ 2002

2) ಬಸವಕಲ್ಯಾಣ:

ಯೋಜನೆ: ಬಸವಕಲ್ಯಾಣ ಪಟ್ಟಣಕ್ಕೆ ಚುಳಕಿ ನಾಲಾ ಜಲಾಶಯ ಮೂಲದಿಂದ ಸಮಗ್ರ ನೀರು ಸರಬರಾಜು ಒದಗಿಸುವ ಯೋಜನೆ.

ಅಂದಾಜು ವೆಚ್ಚ: ರೂ 1250.00 ಲಕ್ಷಗಳು ಯೋಜನೆಗೆ ತಗುಲಿದ ವೆಚ್ಚ ರೂ.1136.17 ಲಕ್ಷಗಳು ಯೋಜನೆ ಪೂರ್ಣಗೊಳಿಸಿದ ದಿನಾಂಕ:ಏಪ್ರಿಲ್ 2002

3) ಭಾಲ್ಕಿ:

ಯೋಜನೆ: ಭಾಲ್ಕಿ ಪಟ್ಟಣಕ್ಕೆ ಕಾರಾಂಜಾ ನದಿ ಮೂಲದಿಂದ ಸುಧಾರಿತ ನೀರು ಸರಬರಾಜು ಒದಗಿಸುವ ಯೋಜನೆ

ಅಂದಾಜು ವೆಚ್ಚ: ರೂ.603.02 ಲಕ್ಷಗಳು ಯೋಜನೆಗೆ ತಗುಲಿದೆ ವೆಚ್ಚ: ರೂ.585.54 ಲಕ್ಷಗಳು ಚಾಲನೆಗೊಳಿಸಿದ ದಿನಾಂಕ: ಅಕ್ಟೋಬರ್ 2006 ಬ್ಯಾರೇಜ್ ನಿರ್ಮಾಣ ಪೂರ್ಣಗೊಳಿಸಿದ ದಿನಾಂಕ: ಏಪ್ರಿಲ್ 2010.

4) ಔರಾದ:

ಯೋಜನೆ: ಔರಾದ ಪಟ್ಟಣಕ್ಕೆ ತೇಗಂಪುರ ಹತ್ತಿರದ ಕೊಳವೆ ಭಾವಿಗಳು ಮತ್ತು ತೆರೆದ ಭಾವಿಗಳ ಮೂಲದಿಂದ ತ್ವರಿತ ನೀರು ಸರಬರಾಜು ಒದಗಿಸುವ ಯೋಜನೆ

ಅಂದಾಜು ವೆಚ್ಚ: ರೂ258.15 ಲಕ್ಷಗಳು ಯೋಜನೆಗೆ ತಗುಲಿದ ವೆಚ್ಚ: 263.62 ಲಕ್ಷಗಳು ಚಾಲನೆಗೊಳಿಸಿದ ದಿನಾಂಕ: ಜನವರಿ 2006

5) ಹುಮನಾಬಾದ ಮತ್ತು ಚಿಟಗುಪ್ಪ ಪಟ್ಟಣಗಳು:

ಯೋಜನೆ: ಹುಮನಾಬಾದ, ಚಿಟಗುಪ್ಪ ಪಟ್ಟಣಗಳು ಹಾಗೂ ಮಾರ್ಗ ಮಧ್ಯದ 10 ಹಳ್ಳಿಗಳಿಗೆ ಕಾರಂಜಾ ಜಲಾಶಯದ ಮೂಲದಿಂದ ಸಂಯುಕ್ತ ನೀರು ಸರಬರಾಜು ಒದಗಿಸುವ ಯೋಜನೆ.

ಅಂದಾಜು ವೆಚ್ಚ: ರೂ.1904.00 ಲಕ್ಷಗಳು

ವೆಚ್ಚ: ರೂ.2661.33 ಲಕ್ಷಗಳು

ಚಾಲನೆಗೊಳಿಸಿದ ದಿನಾಂಕ:

1. ಹುಮನಾಬಾದ ಪಟ್ಟಣಕ್ಕೆ: ನವೆಂಬರ್ 2008

2.ಚಿಟಗುಪ್ಪ ಪಟ್ಟಣಕ್ಕೆ: ಮಾರ್ಚ್ 2009

ಆ)

1) ಭಾಲ್ಕಿ ಪಟ್ಟಣಕ್ಕೆ ಕಾರಾಂಜಾ ನದಿಯಿಂದ ಕುಡಿಯುವ ನೀರು ಸರಬರಾಜು ಯೋಜನೆಯನ್ನು ರೂ.603.02 ಲಕ್ಷಗಳ ಅಂದಾಜು ವೆಚ್ಚದಲ್ಲಿ ಅಕ್ಟೋಬರ್ 2006ರಲ್ಲಿ (ಸಗಟು ನಿರು ಸರಬರಾಜು) ಚಾಲನೆಗೊಳಿಸಲಾಗಿದೆ.

2) ಭಾಲ್ಕಿ ಪಟ್ಟಣಕ್ಕೆ ವಿತರಣಾ ವ್ಯವಸ್ಥೆ ಅಭಿವೃದ್ಧಿಪಡಿಸಲು ಅಂದಾಜು ರೂ.540.00 ಲಕ್ಷಗಳ ಯೋಜನೆಗೆ ಅನುಮೋದನೆ ನೀಡಲಾಗಿದ್ದು, ಕಾಮಗಾರಿಗಳು ಜುಲೈ 2009ರಲ್ಲಿ ಪ್ರಾರಂಭಿಸಲಾಗಿದೆ. ಕಾಮಗಾರಿ ಪ್ರಗತಿಯಲ್ಲಿದೆ.

ಇ)

1) ಭಾಲ್ಕಿ ಪಟ್ಟಣಕ್ಕೆ ಕಾರಂಜಾ ನದಿಯಿಂದ ಸಗಟು ನೀರು ಸರಬರಾಜು ಯೋಜನೆಗೆ ರೂ.585.54 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

2) ಭಾಲ್ಕಿ ಪಟ್ಟಣಕ್ಕೆ ವಿತರಣಾ ವ್ಯವಸ್ಥೆಯ ಯೋಜನೆಗೆ ರೂ.192.08 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಈ) ಈ ಯೋಜನೆಯ ಶೇ.40ರಷ್ಟು ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಉಳಿದ ಕಾಮಗಾರಿಗಳು ಪ್ರಗತಿಯಲ್ಲಿದೆ.

ಉ) ಕಾಮಗಾರಿಗಳಿಗೆ ಅವಶ್ಯವಿರುವ ಸಾಮಾಗ್ರಿಗಳನ್ನು ಇಲಾಖಾವತಿಯಿಂದ ನೀಡಲು ಕ್ರಮ ಕೈಗೊಳ್ಳಲಾಗಿದೆ ಮತ್ತು ಕಾಮಗಾರಿಗಳನ್ನು ಪೂರ್ಣಗೊಳಿಸಲು ಪ್ರಾಧಿಕಾರಗಳ ಸಮನ್ವಯದೊಂದಿಗೆ ಅಡಚಣೆಗಳನ್ನು

ಬಗೆಹರಿಸಿ ಗುತ್ತಿಗೆದಾರರು ಶೀಘ್ರ ಕಾಮಗಾರಿಯನ್ನು ಪೂರ್ಣಗೊಳಿಸಲು ಅನುವು ಮಾಡಲಾಗಿದೆ.

ಊ) ಮೇಲಿನಂತೆ ಕ್ರಮವಹಿಸಲಾಗಿದೆ.

ಮುಖ್ಯಮಂತ್ರಿ ಪರಿಹಾರ ನಿಧಿ ಪಡೆದುಕೊಳ್ಳುವಲ್ಲಿ ತೊಂದರೆ

779(1361) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ:(ಭಾಲ್ಕಿ) ಮಾನ್ಯ ಮುಖ್ಯಮಂತ್ರಿ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 2 ವರ್ಷಗಳಲ್ಲಿ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ವಿವಿಧ ಕಾಯಿಲೆಗಳು ಮತ್ತು ಶಸ್ತ್ರ ಚಿಕಿತ್ಸೆಗೆ, ಎಷ್ಟು ಮೊತ್ತದ ಧನ ಸಹಾಯವನ್ನು ನೀಡಲಾಗಿದೆ: (ಜಿಲ್ಲಾವಾರು ಅಂಕಿ ಅಂಶಗಳನನ್ನು ಒದಗಿಸುವುದು)

ಆ) ಈ ಧನ ಸಹಾಯವನ್ನು ಪಡೆದುಕೊಳ್ಳಲು ಇರುವ ಮಾನದಂಡಗಳೇನು:

ಇ) ಈ ಧನ ಸಹಾಯವನ್ನು ಪಡೆದುಕೊಳ್ಳಲು ಬಿ.ಪಿ.ಎಲ್. ಪಡಿತರ ಕಾರ್ಡುಗಳನ್ನು ಹೊಂದಿರುವುದನ್ನು ಕಡ್ಡಾಯಗೊಳಿಸಿರುವುದು ನಿಜವಲ್ಲವೇ:

ಈ) ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಬಿ.ಪಿ.ಎಲ್. ಪಡಿತರ ಚೀಟಿಗೆ ಅರ್ಹರಾಗಿರುವ ಎಷ್ಟೋ ಕಡುಬಡವರಿಗೆ ಎ.ಪಿ.ಎಲ್. ಕಾರ್ಡುಗಳನ್ನು ವಿತರಿಸಿರುವುದರಿಂದ ಇಂತಹವರು ಅನಾರೋಗ್ಯಕ್ಕೆ ಒಳಗಾದ ಸಂದರ್ಭದಲ್ಲಿ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯನ್ನು ಪಡೆದುಕೊಳ್ಳುವಲ್ಲಿ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಉ) ಹಾಗಿದ್ದಲ್ಲಿ, ಗ್ರಾಮಾಂತರದ ಕಡುಬಡವರು, ಎ.ಪಿ.ಎಲ್ ಕಾರ್ಡುಗಳನ್ನು ಹೊಂದಿದ್ದರೂ ಸಹ ಅಂತಹವರಿಗೂ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಧನ ಸಹಾಯವನ್ನು ನೀಡುವ ಬಗ್ಗೆ ಸರ್ಕಾರವು ಪರಿಶೀಲನೆ ನಡೆಸುವುದೇ: